ನಿಮ್ಮೊಡನೆ

# ಕಳ್ಳಹಣ ವಾಪಸ್ ತನ್ನಿ

> ವಿದೇಶಿ ಬ್ಯಾಂಕುಗಳಲ್ಲಿ ಗುಪ್ತವಾಗಿ ಕಳ್ಳಹಣವನ್ನು ಕೂಡಿಡುವ ಪ್ರವೃತ್ತಿ ಭಾರತೀಯ ಶ್ರೀಮಂತರಲ್ಲಿ ಬೆಳೆದು ಹಲವು ವರ್ಷಗಳೇ ಉರುಳಿವೆ. ಮೊದಲೆಲ್ಲ ಸ್ವಿಜರ್ಲಂಡ್‌ನ ಬ್ಯಾಂಕುಗಳಲ್ಲಿ ಕಳ್ಳಹಣ ಕೂಡಿಡುವುದರ ಬಗ್ಗೆ ಮಾತ್ರ ಸುದ್ದಿ ಇತ್ತು. ಆದರೆ ಈಗ ಪ್ರಪಂಚದ 40ಕ್ಕೂ ಹೆಚ್ಚು ದೇಶಗಳಲ್ಲಿ, ದ್ವೀಪರಾಷ್ಟ್ರಗಳಲ್ಲಿ ಕಳ್ಳಹಣವನ್ನು ಗುಪ್ತವಾಗಿ, ಯಾವ ಹಿಂಜರಿಕೆಯೂ ಇಲ್ಲದೆ ಕೂಡಿಡಬಹುದೆಂಬುದು ಗೊತ್ತಾಗಿದೆ. ಒಂದು ಅಂದಾಜಿನ ಪ್ರಕಾರ, ವಿದೇಶಗಳಲ್ಲಿ ಭಾರತೀಯ ಶ್ರೀಮಂತರು ಸುಮಾರು 1500 ಶತ ಕೋಟಿ ಡಾಲರ್‌ಗಳಷ್ಟು ಹಣವನ್ನು ಗುಪ್ತವಾಗಿ ಕೂಡಿಟ್ಟಿದ್ದಾರೆ!



ಭಾರತೀಯ ಶ್ರೀಮಂತರು ವಿದೇಶಿ ಬ್ಯಾಂಕುಗಳಲ್ಲಿ ಕೂಡಿಟ್ಟಿರುವ ಕಪ್ಪು ಹಣದ ಪ್ರಮಾಣ ಎಷ್ಟಿರಬಹುದು? ಯಾವೆಲ್ಲಾ ಭಾರತೀಯ ಶ್ರೀಮಂತರು ಈ ಹಣವನ್ನು ಕೂಡಿಟ್ಟಿರಬಹುದು? ಈ ಎಲ್ಲ ಹಣವನ್ನೂ 'ಕಪ್ಪು ಹಣ' ಎಂದು ಕರೆಯಬಹುದೆ? ಈ ಹಣವನ್ನು ವಶಪಡಿಸಿಕೊಂಡು ಮರಳಿ ಭಾರತಕ್ಕೆ ತರಲು ಸಾಧ್ಯವಿಲ್ಲವೆ?

ವಿದೇಶಗಳ ಬ್ಯಾಂಕುಗಳಲ್ಲಿ ಗುಪ್ತವಾಗಿ ಕಳ್ಳಹಣವನ್ನು ಕೂಡಿಡುವ ಪ್ರವೃತ್ತಿ ಭಾರತೀಯ ಶ್ರೀಮಂತರಲ್ಲಿ ಬೆಳೆದು ಹಲವು ವರ್ಷಗಳೇ ಉರುಳಿವೆ. ಮೊದಲೆಲ್ಲ ಸ್ವಿಜರ್ಲಂಡ್‌ನ ಬ್ಯಾಂಕುಗಳಲ್ಲಿ ಕಳ್ಳಹಣ ಕೂಡಿಡುವುದರ ಬಗ್ಗೆ ಮಾತ್ರ ಸುದ್ದಿ ಇತ್ತು. ಆದರೆ ಈಗ ಪ್ರಪಂಚದ 40ಕ್ಕೂ ಹೆಚ್ಚು ದೇಶಗಳಲ್ಲಿ, ದ್ವೀಪರಾಷ್ಟ್ರಗಳಲ್ಲಿ ಕಳ್ಳಹಣವನ್ನು ಗುಪ್ತವಾಗಿ, ಯಾವ ಹಿಂಜರಿಕೆಯೂ ಇಲ್ಲದೆ ಕೂಡಿಡಬಹುದೆಂಬುದು ಜನಸಾಮಾನ್ಯರಿಗೂ ಗೊತ್ತಾಗಿದೆ. ಒಂದು ಅಂದಾಜಿನ ಪ್ರಕಾರ, ವಿದೇಶಗಳಲ್ಲಿರುವ ಬ್ಯಾಂಕುಗಳಲ್ಲಿ ಭಾರತೀಯ ಶ್ರೀಮಂತರು ಸುಮಾರು 1500 ಶತಕೋಟಿ ಡಾಲರ್‌ಗಳಷ್ಟು ಹಣವನ್ನು ಗುಪ್ತವಾಗಿ ಕೂಡಿಟ್ಟಿದ್ದಾರೆ! ಈ ಮೊತ್ತ ಭಾರತ ಹೊಂದಿರುವ ವಿದೇಶಿ ಸಾಲದ ಮೊತ್ತಕ್ಕಿಂತ 13 ಪಟ್ಟು ಹೆಚ್ಚು ಎನ್ನಲಾಗುತ್ತಿದೆ. ಅಪ್ರಾಮಾಣಿಕ ಉದ್ಯಮಿಗಳು, ಹಗರಣಗಳಲ್ಲಿ ಹೂತುಹೋದ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು, ಈ ರೀತಿ ವಿದೇಶಿ ಬ್ಯಾಂಕುಗಳಲ್ಲಿ ಕಳ್ಳಹಣ ಹೂಡಿದವರಲ್ಲಿ ಸೇರಿದ್ದಾರೆ.

ಪ್ರತಿವರ್ಷ ಸ್ವಿಜರ್ಲಂಡ್‌ಗೆ 80 ಸಾವಿರ ಜನ ಪ್ರವಾಸ ಹೋಗುತ್ತಾರಂತೆ. ಇವರಲ್ಲಿ ಸುಮಾರು 25 ಸಾವಿರ ಜನ ಪದೇ ಪದೇ ಸ್ವಿಜರ್ಲಂಡ್ ಪ್ರವಾಸ ಕೈಗೊಳ್ಳುತ್ತಾರೆ ಎನ್ನುತ್ತದೆ ಪ್ರವಾಸೋದ್ಯಮ ಮೂಲಗಳು. ಹೀಗೆ ಪದೇ ಪದೇ ಹೋಗುವವರ ಉದ್ದೇಶ ಏನಿದೆಯೆಂಬುದನ್ನು ತಿಳಿಯಲು ಕಣಿ ಕೇಳಬೇಕಿಲ್ಲ.

ಭಾರತದ ಸುಪ್ರೀಂಕೋರ್ಟ್ ಕೂಡಾ ಇತ್ತೀಚೆಗೆ ಈ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದೆ. 'ಇದು ರಾಷ್ಟ್ರದ ಹಣದ ಕಳ್ಳತನವಲ್ಲದೆ ಬೇರೇನೂ ಅಲ್ಲ. ವಿದೇಶಗಳಲ್ಲಿ ಕಪ್ಪು ಹಣವನ್ನು ಇರಿಸುವುದು ಎಂದರೆ ರಾಷ್ಟ್ರದ ಲೂಟಿಗೆ ಸಮ' ಎಂದು ಸುಪ್ರೀಂಕೋರ್ಟಿನ ದ್ವಿಸದಸ್ಯ ಪೀಠ ಕಟುವಾಗಿ ಹೇಳಿದೆ. ಅದರಲ್ಲೂ 'ಜರ್ಮನಿಯ ಲೀಚೆನ್‌ಸ್ಟೀನ್ ಬ್ಯಾಂಕಿನಲ್ಲಿ 26 ಶ್ರೀಮಂತರು ಕೂಡಿಟ್ಟ ಹಣದ ವಿವರಗಳನ್ನು ಬಹಿರಂಗ ಪಡಿಸಲು ನಿರಾಕರಿಸಿ, ಸರಕಾರವೇ ನ್ಯಾಯಾಲಯದಲ್ಲಿ ಪ್ರಮಾಣ ಪತ್ರ ಸಲ್ಲಿಸಿದೆ. ಆ ಪ್ರಮಾಣಪತ್ರಕ್ಕೆ ನಿರ್ದೇಶಕ ದರ್ಜೆ ಅಧಿಕಾರಿಯೊಬ್ಬರು ಸಹಿ ಹಾಕಿದ್ದಾರೆ' ಎನ್ನುವ ವಿಷಯವೂ ಸುಪ್ರೀಂಕೋರ್ಟಿನ ಮುಂದೆ ಬಂದಿದೆ. 'ವಿದೇಶಗಳಲ್ಲಿ ಭಾರತೀಯರು ಕೂಡಿಟ್ಟಿರುವ ಕಪ್ಪುಹಣದ ಪ್ರಮಾಣ ದಿಗಿಲು ಹುಟ್ಟಿಸುವಷ್ಟಿದೆ' ಎಂದು ಸ್ವತಃ ಸರಕಾರದ ಸಾಲಿಸಿಟರ್ ಜನರಲ್ ಕೋರ್ಟಿನ ಮುಂದೆ ಹೇಳಿದ್ದಾರೆ. ಆದರೆ ಹೆಸರು ಬಹಿರಂಗ ಪಡಿಸಲು ಸಾಧ್ಯವಿಲ್ಲ ಎನ್ನುವುದು ಕೇಂದ್ರ ಸರಕಾರದ ನಿಲುವು!

ಬೇರೆ ರಾಷ್ಟ್ರಗಳ ಜತೆ ಹೂಡಿಕೆಗೆ, ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿ ಮಾಡಿಕೊಂಡಿರುವ ಒಪ್ಪಂದಗಳಿಂದಾಗಿ ಈ ವಿವರಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎನ್ನುತ್ತಿದೆ ಸರಕಾರ. 'ಇದು ನಂಬಿಕೆಯ ಪ್ರಶ್ನೆ. ನಾವು ವಿದೇಶಿ ಸರಕಾರಗಳಿಂದ ತೆರಿಗೆ ಸಂಗ್ರಹದ ಉದ್ದೇಶಕ್ಕೆಂದು ಮಾಹಿತಿ ಪಡೆದಿದ್ದೇವೆ. ಆ ಮಾಹಿತಿಗಳನ್ನು ಬಹಿರಂಗಪಡಿಸಿದರೆ ಮುಂದೆ ಈ ಸರಕಾರಗಳು ನಮ್ಮನ್ನು ನಂಬಿ ಮಾಹಿತಿ ನೀಡುವುದಿಲ್ಲ' ಎಂದು ಸ್ವತಃ ಹಣಕಾಸು ಸಚಿವರು ಸ್ಪಷ್ಟನೆ ನೀಡಿದ್ದಾರೆ. ಸರಕಾರವೊಂದು ಈ ರೀತಿ ನಿಸ್ಸಹಾಯಕವಾಗಿರುವುದು ಸರಿಯೆ? ಒಪ್ಪಂದಗಳ ಮರುಪರಿಶೀಲನೆ ಮಾಡಿ, ನಿಯಮಗಳನ್ನು ತಿದ್ದಿ, ಸರಕಾರಕ್ಕೆ ಆಗುವ ಆರ್ಥಿಕ ಮೋಸವನ್ನು ತಡೆಗಟ್ಟಲು ಸಾಧ್ಯವಿಲ್ಲವೆ?

ಇದೇ ಸಂದರ್ಭದಲ್ಲಿ ಫೆಮಾ ಕಾಯ್ದೆ ಉಲ್ಲಂಘಿಸಿ ಭ್ರಷ್ಟ ಐಎಎಸ್ ದಂಪತಿ ಕೋಟ್ಯಂತರ ರೂಪಾಯಿ ಮೌಲ್ಯದ ಅಕ್ರಮ ಆಸ್ತಿ ಮಾಡಿರುವ ಪ್ರಕರಣವೊಂದು ಮಧ್ಯಪ್ರದೇಶದಿಂದ ವರದಿಯಾಗಿದೆ. ಒಂದು ವರ್ಷದ ಹಿಂದೆಯೇ ಈ ದಂಪತಿಯ ಮನೆ ಮೇಲೆ ದಾಳಿ ಮಾಡಿ, 3 ಕೋಟಿ ರೂಪಾಯಿ ಮೌಲ್ಯದ ಅಕ್ರಮ ಸಂಪತ್ತು ವಶಪಡಿಸಲಾಗಿತ್ತು. ಆ ಬಳಿಕ ದಂಪತಿ ಐಎಎಸ್ ಸೇವೆಯಿಂದ ಅಮಾನತು ಹೊಂದಿದ್ದು ಬಿಟ್ಟರೆ ಬೇರೆ ಯಾವ ಶಿಕ್ಷೆಯೂ ಆಗಿಲ್ಲ. ಈಗ ಮತ್ತೆ ದಾಳಿ ನಡೆದಿದ್ದು, ಒಟ್ಟು ಅಕ್ರಮ ಆಸ್ತಿಯ ಮೊತ್ತ 360 ಕೋಟಿ ರೂಪಾಯಿ ಎನ್ನುವುದು ಬಯಲಾಗಿದೆ. ಇವರೇನು ಹಸಿವಾದರೆ ಹಣವನ್ನೇ ತಿನ್ನುವವರೆ?

ಸರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಎಲ್ಲ ಕಳ್ಳಹಣವನ್ನೂ ಮರಳಿ ಭಾರತಕ್ಕೆ ತರಲೇಬೇಕು. ದೃಢಕ್ರಮಕ್ಕೆ ಇದು ಸಕಾಲ.

■ ಬಿ.ಎಂ.ಹನೀಫ್